ವಿಜಯ ಕರ್ನಾಟಕ

# ಜೈನ್ ಯೂನಿವರ್ಸಿಟಿ ಚಾಂಪಿಯನ್

**ಬೆಂಗಳೂರು:** ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ಮಹಿಳಾ ತಂಡ ತಮಿಳುನಾಡಿನ ವೆಲ್ಲೂರಿನ ಕ್ರಿಸ್ಟಿಯನ್ ವೈದ್ಯಕೀಯ ಕಾಲೇಜು ಆಯೋಜಿಸಿದ್ದ ಅಖಿಲ ಭಾರತ ಅಂತರ ಕಾಲೇಜು ಬಾಸ್ಕೆಟ್ ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ತಮಿಳುನಾಡಿನಲ್ಲಿ ಸೋಮವಾರ ನಡೆದ ಫೈನಲ್ ಹಣಾಹಣಿಯಲ್ಲಿ ಜೈನ್ ವಿವಿ ತಂಡ 62-47 ಅಂಕಗಳಿಂದ ಎಂ.ಒ.ಪಿ. ವೈಷ್ಣವ್ ಕಾಲೇಜು ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು. ಜೈನಿ ವಿವಿ ಪರ ಮತುರಾವಾಣಿ ಮತ್ತು ಸಂಧ್ಯಾ ಹಾಗೂ ಸಿಮೊನೆಲ್ ಶ್ರೇಷ್ಠ ಪ್ರದರ್ಶನ ತೋರಿದರು.